# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 645
2. ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 09.03.2026
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕಳೆದ ಮೂರು ವರ್ಷಗಳಿಂದ ಕಲಬುರಗಿ ಕಿದ್ವಾಯಿ ಪೆರಿಫೆರಲ್ ಆಸ್ಪತ್ರೆಗೆ ಅತ್ಯಗತ್ಯವಾಗಿರುವ ಮೆಡಿಕಲ್ ಅಂಕೊಲಜಿಸ್ಟ್ (Medical Oncologist) ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈವರೆಗೆ ನೇಮಕಾತಿ ಮಾಡದಿರಲು ಕಾರಣಗಳೇನು | ಬಂದಿದೆ.<br><br>ಕಲಬುರಗಿ ಕಿದ್ವಾಯಿ ಪೆರಿಫೆರಲ್ ಆಸ್ಪತ್ರೆಯ ಮೆಡಿಕಲ್ ಅಂಕೊಲಜಿಸ್ಟ್ (Medical Oncologist) ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯು ಒಳಗೊಂಡಂತೆ, ಸದರಿ ಸಂಸ್ಥೆಗೆ 10 ಖಾಯಂ ಹುದ್ದೆಗಳನ್ನು ನೇಮಕ ಮಾಡಲು ಸಂಸ್ಥೆಗೆ ಅನುಮತಿ ನೀಡಲಾಗಿರುತ್ತದೆ.<br><br>ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಮೀಸಲಾಗಿ ರೋಸ್ಟರ್ ಬಿಂದುಗಳನ್ನು ದೃಢೀಕರಿಸುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಸ್ಥೆಯಿಂದ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಇಲಾಖೆಗಳಿಂದ ಸಹಮತಿ ಬಂದ ತಕ್ಷಣ ಖಾಯಂ ಆಗಿ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು. |
| (ಆ) | ಕಳೆದ ಮೂರು ವರ್ಷಗಳಲ್ಲಿ ಸದರಿ ಆಸ್ಪತ್ರೆಯಲ್ಲಿ ಎಷ್ಟು ಮಂದಿ ಕ್ಯಾನ್ಸರ್ ರೋಗಿಗಳು ಮರಣ ಹೊಂದಿದ್ದಾರೆ; ತಜ್ಞ ವೈದ್ಯರ ಕೊರತೆಯಿಂದಲೇ ಸಾವುಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವರ್ಷವಾರು ಮಾಹಿತಿ ನೀಡುವುದು) | ಕಳೆದ 03 ವರ್ಷಗಳಲ್ಲಿ ಕ್ಯಾನ್ಸರ್ ಖಾಯಿಲೆಯಿಂದ ಮರಣ ಹೊಂದಿರುವ ರೋಗಿಗಳ ವಿವರ ಈ ಕೆಳಗಿನಂತಿದೆ: |

| ವರ್ಷ | ಮಹಿಳೆಯರು | ಪುರಷರು | ಒಟ್ಟು |
|---|---|---|---|
| 2023 | 26 | 28 | 54 |
| 2024 | 23 | 28 | 51 |
| 2025 | 12 | 21 | 33 |
| | | ಒಟ್ಟು | 138 |

| | | |
|---|---|---|
| | | ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ಕಲ್ಬುರ್ಗಿ ಇಲ್ಲಿ ಪ್ರಸ್ತುತ 80 ಹಾಸಿಗೆಗಳ ಸಾಮರ್ಥ್ಯ ಹೊಂದಿರುವ ಆಸ್ಪತ್ರೆಯಾಗಿರುತ್ತದೆ. ಸದರಿ ಆಸ್ಪತ್ರೆಗೆ ಬೋಧಕ ವೃಂದದಲ್ಲಿ 15 ಹುದ್ದೆಗಳು ಮಂಜೂರಾಗಿರುತ್ತವೆ. ಪ್ರಸ್ತುತ 04 ಹುದ್ದೆಗಳು ಖಾಯಂ ಆಗಿ ಭರ್ತಿಯಾಗಿದ್ದು, 11 ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಇರುವ 11 ಹುದ್ದೆಗಳಲ್ಲಿ ರೋಗಿಗಳ ಆರೈಕೆಯ ಹಿತದೃಷ್ಟಿಯಿಂದ 07 ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ಗುಣಾತ್ಮಕವಾದ ಚಿಕಿತ್ಸೆಯನ್ನು ನೀಡಲು ತಜ್ಞ ವೈದ್ಯರು ಕೊರತೆ ಇರುವುದಿಲ್ಲ.<br><br>ಸಾಂದರ್ಭಿಕವಾಗಿ ಹೇಳುವುದಾದರೆ, ಕ್ಯಾನ್ಸರ್ ಖಾಯಿಲೆಯನ್ನು ಆರಂಭಿಕವಾಗ ಗುರುತಿಸಿದಲ್ಲಿ ಖಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯತೆ ಇರುತ್ತದೆ. ಆದರೆ, ಕ್ಯಾನ್ಸರ್ ರೋಗಿಗಳು 3 ಮತ್ತು 4ನೇ ಹಂತಕ್ಕೆ ಬಂದಾಗ ಹಾಗೂ ಖಾಯಲೆ ಉಲ್ಬಣಗೊಂಡಾಗ ಚಿಕಿತ್ಸೆಗೆ ಬರುತ್ತಾರೆ. ಆದುದರಿಂದ ಕ್ಯಾನ್ಸರ್ ಖಾಯಿಲೆಯನ್ನು ಗುಣಪಡಿಸುವುದು ಕಷ್ಟವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಕ್ಯಾನ್ಸರ್ ರೋಗಿಗಳು ಮರಣ ಹೊಂದುವ ಪ್ರಮಾಣ ಹೆಚ್ಚು ಇರುತ್ತದೆ. |
| (ಇ) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ ಬಡ ರೋಗಿಗಳು ಚಿಕಿತ್ಸೆ ಪಡೆಯಲು ಸ್ಥಳೀಯವಾಗಿ ಅಂಕೊಲಜಿಸ್ಟ್ ಸಹಿ ಇಲ್ಲದೆ ಬೆಂಗಳೂರಿನ ಮೇಲೆ ಅವಲಂಬಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಪ್ರಕ್ರಿಯೆಯಿಂದಾಗಿ ರೋಗಿಗಳಿಗೆ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು; | ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ಕಲ್ಬುರ್ಗಿ ಇಲ್ಲಿ ಕಿಮೋಥೆರಪಿ ಚಿಕಿತ್ಸೆಯನ್ನು ನೀಡುವ ಮೆಡಿಕಲ್ ಆಂಕಾಲಜಿಸ್ಟ್ ಡಾ. ಮಂಜುನಾಥ್ ರವರನ್ನು ಗುತ್ತಿಗೆ ಆಧಾರದ ಮೇಲೆ ಪ್ರಸ್ತುತ ನೇಮಕಾತಿ ಮಾಡಲಾಗಿದ್ದು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ ಕ್ಯಾನ್ಸರ್ ರೋಗಿಗಳಿಗೆ ಕಿಮೋಥೆರಪಿ ಚಿಕಿತ್ಸೆಯನ್ನು ನೀಡಲು ಯಾವುದೇ ವಿಳಂಬವಾಗದಂತೆ ಕ್ರಮವಹಿಸಲಾಗಿದೆ. |
| (ಈ) | ಸದರಿ ಕೇಂದ್ರದಲ್ಲಿ ಮಂಜೂರಾದ ಒಟ್ಟು ತಜ್ಞ ವೈದ್ಯರ ಹುದ್ದೆಗಳೆಷ್ಟು; ಅದರಲ್ಲಿ ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಖಾಯಂ ಮತ್ತು ಹೊರಗುತ್ತಿಗೆ ಆಧಾರಿತ ಹುದ್ದೆಗಳ ಪ್ರತ್ಯೇಕ ಮಾಹಿತಿ ನೀಡುವುದು) | ಸದರಿ ಕೇಂದ್ರಕ್ಕೆ ಸಹ ಪ್ರಾಧ್ಯಾಪಕ ವೃಂದದಲ್ಲಿ 01 ಹುದ್ದೆ, ಸಹಾಯಕ ಪ್ರಾಧ್ಯಾಪಕ ವೃಂದದಲ್ಲಿ 14 ಸೇರಿದಂತೆ ಒಟ್ಟು 15 ಬೋಧಕ ಹುದ್ದೆಗಳು ಮಂಜೂರಾಗಿರುತ್ತವೆ.<br>ಇದರಲ್ಲಿ 04 ಹುದ್ದೆಗಳು ಖಾಯಂ ಆಗಿ ಭರ್ತಿಯಾಗಿದ್ದು, 7 ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದ್ದು, 4 ಹುದ್ದೆಗಳು ಖಾಲಿ ಇರುತ್ತವೆ. |

| | | |
|---|---|---|
| (ಉ) | ಕಲಬುರಗಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ 250 ಹಾಸಿಗೆಗಳ ಕ್ಯಾನ್ಸರ್ ಆಸ್ಪತ್ರೆಯ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; ಈ ಆಸ್ಪತ್ರೆಯು ಯಾವ ಕಾಲಮಿತಿಯೊಳಗೆ ಪೂರ್ಣಗೊಂಡು ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ? | ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ಕಲಬುರಗಿ ಇಲ್ಲಿ ನೂತನವಾಗಿ 250 ಹಾಸಿಗೆಗಳ ಸಾಮರ್ಥ್ಯವಿರುವ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಸದರಿ ಕಟ್ಟಡದ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್ 2026ರ ವೇಳೆಗೆ ಪೂರ್ಣಗೊಂಡು ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ ಎಂದು ಅಂದಾಜಿಸಲಾಗಿದೆ. |

**ಸಂಖ್ಯೆ:** ಎಂಇಡಿ 58 ಕೆಯುಎಂ 2026

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.